# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ 792 ಆರ್‌ಟಿಬಿ(2)/2022-23/3579

ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ: 25-01-2023.

## ::ಪತ್ರಿಕಾ ಪ್ರಕಟಣೆ::

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ:22-01-2023ರಂದು ನಡೆಸಿದ ಪೌರಾಡಳಿತ ನಿರ್ದೇಶನಾಲಯದಲ್ಲಿನ ವಿವಿಧ ಗ್ರೂಪ್ 'ಸಿ' ಹುದ್ದೆಗಳ ಹಾಗೂ ನಗರ ಮತ್ತು ಗ್ರಾಮಾಂತರ ಇಲಾಖೆಯಲ್ಲಿನ ಸಹಾಯಕ ನಗರ ಯೋಜಕರು ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಕೀ ಉತ್ತರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ **http://kpsc.kar.nic.in** ನಲ್ಲಿ ದಿ:23-01-2023 ರಂದು ಪ್ರಕಟಿಸಲಾಗಿದೆ.

ಸದರಿ ಕೀ-ಉತ್ತರಗಳಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ, ನಿಗದಿತ ಶುಲ್ಕದೊಂದಿಗೆ **ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560 001** ಇವರಿಗೆ **ದಿ:30-01-2023ರ ಸಂಜೆ 5.30 ರೊಳಗಾಗಿ** ತಲುಪುವಂತೆ ಈ ವಿಳಾಸಕ್ಕೆ ಮಾತ್ರ ಕಳುಹಿಸಿಕೊಡಬೇಕು. ಆಕ್ಷೇಪಣೆಗಳ ವಿವರಗಳನ್ನು ಕಡ್ಡಾಯವಾಗಿ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.

ಮುಂದುವರೆದು, ಆಯೋಗದ ಅಂತರ್ಜಾಲತಾಣ **http://kpsc.kar.nic.in** ನಲ್ಲಿ On-line ಮುಖಾಂತರವೂ ಸಹ ನಿಗದಿತ ಶುಲ್ಕವನ್ನು ಪಾವತಿಸಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ನಿಗದಿತ ಶುಲ್ಕವನ್ನು ಪಾವತಿಸದ ಹಾಗೂ ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಆಕ್ಷೇಪಣೆಗಳು ಅಂಚೆಯ ಮೂಲಕ ಆಯೋಗಕ್ಕೆ ತಲುಪಲು ವಿಳಂಬವಾದಲ್ಲಿ ಹಾಗೂ **Online** ಮುಖಾಂತರ ಸಲ್ಲಿಸಲ್ಪಡುವ ಆಕ್ಷೇಪಣೆಗಳು ಯಾವುದೇ ತಾಂತ್ರಿಕ ದೋಷದಿಂದಾಗಿ ರವಾನಿಸಲು/ಸ್ವೀಕರಿಸಲು ವಿಫಲವಾದಲ್ಲಿ ಆಯೋಗವು ಜವಾಬ್ದಾರಿಯಾಗಿರುವುದಿಲ್ಲ.

**(ಸುರಳ್ಕರ್ ವಿಕಾಸ್ ಕಿಶೋರ್)**
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.